| | | |
|---|---|---|
| ಓ ಎಸ್ | 56/2018 | ಪಿ.ಡಬ್ಲ್ಯೂಃ 1 |

ಇಂದು ದಿಃ 27.03.2023 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಬಿ ವೈ ವಕೀಲರಿಂದಃ-

ನನ್ನ ಅಜ್ಜ ಮಹದೇವಪ್ಪ ಮತ್ತು ಅಜ್ಜಿ ಚಿನ್ನಮ್ಮನವರಿಗ ಯಾವುದೇ ಗಂಡುಮಕ್ಕಳಿಲ್ಲ. ಸಾಕ್ಷಿಯು ಮುಂದುವರಿದು 4 ಹೆಣ್ಣು ಮಕ್ಕಳು ಮಾತ್ರ ಎಂದು ನುಡಿಯುತ್ತಾರೆ. ಚಿನ್ನಮ್ಮ ಬಡ ಕುಟುಂಬದ ಮೂಲದಿಂದ ಬಂದವರು ಎಂದರೆ ಸರಿ. ಅವರಿಗೆ ಸ್ವಂತ ಆದಾಯದ ಮೂಲಗಳು ಇರಲಿಲ್ಲ ಎಂದರೆ ಸರಿ. ಮಹದೇವಪ್ಪ ಒಟ್ಟು ಕುಟುಂಬದ ಆದಾಯದಿಂದ ಕೆಲವು ಜಮೀನುಗಳನ್ನು ಖರೀದಿಸಿ ಚಿನ್ನಮ್ಮ ನವರ ಹೆಸರಿಗೆ ಬರೆಸಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ 4 ಹೆಣ್ಣು ಮಕ್ಕಳಿಗೂ ಸಮ ಪಾಲು ಇದೆ ಎಂದರೆ ಸರಿ.

ಮೂರು ಮತ್ತು ಐದನೇ ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ನಂಜನಗೂಡು.